# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ಸಂಖ್ಯೆ:ತುವಿ:ಶೈವಿ:2024-25:/3740 ದಿನಾಂಕ:10.03.2025

**"ಅತೀ ಜರೂರು"**

## ಸುತ್ತೋಲೆ - 2

**ವಿಷಯ:- 2024-25ನೇ ಶೈಕ್ಷಣಿಕ ಸಾಲಿನ ದ್ವಿತೀಯ ಸೆಮಿಸ್ಟರ್‌ನ ಪಠ್ಯಕ್ರಮದ ಕುರಿತು.**

**ಉಲ್ಲೇಖ:- ವಿವಿ ಸುತ್ತೋಲೆ ಪತ್ರ ಸಂಖ್ಯೆ: ತುವಿ:ಶೈವಿ:2024-25/2980 ದಿನಾಂಕ:17.01.2025.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ಪದವಿ ವಿಷಯಗಳ ಅಧ್ಯಯನ ಮಂಡಳಿಯ ಅಧ್ಯಕ್ಷರು/ಸಂಯೋಜಕರಿಗೆ ತಿಳಿಯಪಡಿಸುವುದೇನೆಂದರೆ, 2024-25ನೇ ಶೈಕ್ಷಣಿಕ ಸಾಲಿಗೆ ರಾಜ್ಯ ಶಿಕ್ಷಣ ನೀತಿ ಅನ್ವಯದಂತೆ ಅಧ್ಯಯನ ಮಂಡಳಿಗಳು ಈಗಾಗಲೇ ಸಲ್ಲಿಸಿರುವ ಪ್ರಥಮ ಮತ್ತು ದ್ವಿತೀಯ ಸೆಮಿಸ್ಟರ್‌ನ ಪಠ್ಯಕ್ರಮಗಳನ್ನು ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿದ್ದು, ಸದರಿ ಪಠ್ಯಕ್ರಮಗಳಲ್ಲಿ ದ್ವಿತೀಯ ಸೆಮಿಸ್ಟರ್‌ನ ಪಠ್ಯಕ್ರಮವನ್ನು ಮತ್ತೊಮ್ಮೆ ಪರಿಶೀಲಿಸಿ ಒಂದು ವೇಳೆ ಅಗತ್ಯ ಮಾರ್ಪಾಡುಗಳಿದ್ದಲ್ಲಿ ಸರಿಪಡಿಸಿ Soft Copy ಯನ್ನು MS Word File ಮತ್ತು PDF File ಅನ್ನು ಇ-ಮೇಲ್ **ugacademictut@gmail.com** ಗೆ ದಿನಾಂಕ:24.01.2025ರ ಶನಿವಾರ ಒಳಗಾಗಿ ಸಲ್ಲಿಸಲು ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿತ್ತು. ಕೆಲವು ಅಧ್ಯಯನ ಮಂಡಳಿಯವರು ಈಗಾಗಲೇ ಸಲ್ಲಿಸಿದ್ದು, ಇನ್ನುಳಿದ ಅಧ್ಯಯನ ಮಂಡಳಿಗಳು ಇದುವರೆವಿಗೂ ಸಲ್ಲಿಸಿರುವುದಿಲ್ಲ. ಈ ಸಲುವಾಗಿ ಕಡ್ಡಾಯವಾಗಿ ಆದ್ಯತೆ ಮೇರೆಗೆ ದ್ವಿತೀಯ ಸೆಮಿಸ್ಟರ್‌ನ ಪಠ್ಯಕ್ರಮವನ್ನು ತುರ್ತಾಗಿ ಕಳುಹಿಸಲು ಈ ಮೂಲಕ ಕೋರಲಾಗಿದೆ.

ಆದೇಶದ ಮೇರೆಗೆ,

S. [signature] 10/3

ಉಪಕುಲಸಚಿವರು

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ

ಇವರಿಗೆ

1. ಅಧ್ಯಕ್ಷರು/ ಸಂಯೋಜಕರು, ಎಲ್ಲಾ ಅಧ್ಯಯನ ಮಂಡಳಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು - ಅಧ್ಯಕ್ಷರು/ ಸಂಯೋಜಕರುಗಳಿಗೆ ಇ-ಮೇಲ್ ಕಳುಹಿಸುವುದು.

ಪ್ರತಿಗಳು:

1. ಡೀನರು ಕಲಾ/ ವಿಜ್ಞಾನ/ ವಾಣಿಜ್ಯ ನಿಕಾಯಗಳು ತುಮಕೂರು ವಿಶ್ವವಿದ್ಯಾನಿಲಯ ತುಮಕೂರು-ಮಾಹಿತಿಗಾಗಿ.
2. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಕಛೇರಿ ಪ್ರತಿ.